

# ವ್ಯಾಲಿ ಆಫ್ ಲವ್



ಅದ್ಭುತ ಎಂದೆನಿಸುವ ಎಲ್ಲ ಪ್ರವಾಸಿ ತಾಣಗಳು ವಿಶ್ವದ ಅದ್ಭುತ (ವಂಡರ್ಸ್ ಆಫ್ ದಿ ವರ್ಲ್ಡ್) ತಾಣ ಎನಿಸಲು ಸಾಧ್ಯವಿಲ್ಲ. ಆದರೆ ಕೆಲವು ಜಾಗಗಳು ನಿಜವಾಗಿಯೂ ಈ ಸಾಲಿಗೆ ಸೇರಬೇಕಾದವು ಕೂಡ ಈ ಪಟ್ಟಿಯಿಂದ ದೂರವೇ ಉಳಿದು ಬಿಡುತ್ತವೆ.

ಐರ್ಲೆಂಡ್‌ನಲ್ಲಿರುವ 'ವ್ಯಾಲಿ ಆಫ್ ಲವ್' ವಿಶ್ವದ ಅದ್ಭುತಗಳ ಸಾಲಿಗೆ ಸೇರುವ ಎಲ್ಲ ಅರ್ಹತೆಗಳನ್ನು ಹೊಂದಿದ್ದರೂ ಇಲ್ಲಿಗೆ ಆ ಭಾಗ್ಯ ಬಂದಿಲ್ಲ. ಕಾರಣ, ಬಹು ಪುರಾತನವಾದ ಇಲ್ಲಿನ ಸ್ಮಾರಕಗಳು ಪಾಳು ಬಿದ್ದಿರುವುದು. ಹೀಗಾಗಿ ಇದು ಪ್ರವಾಸಿಗರಿಂದಲೂ ಬಹುದೂರ ಉಳಿದಿದೆ.

ಈ ಸುಂದರ ತಾಣ ಸುಮಾರು ಒಂದು ಕಿಲೋಮೀಟರ್ ವಿಸ್ತಾರದಲ್ಲಿದ್ದು, ನೆಲಮಟ್ಟದಿಂದಲೂ ಒಂದು ಕಿಲೋಮೀಟರ್ ಎತ್ತರದಲ್ಲಿದೆ. ವ್ಯಾಲಿ ಆಫ್ ಲವ್, ಈಜಿಪ್ಟ್‌ನ ಪಿರಮಿಡ್‌ಗಳಿಗಿಂತಲೂ ಸುಮಾರು 3000 ವರ್ಷಗಳಿಗಿಂತಲೂ ಪುರಾತನವಾದದ್ದು ಎಂಬುದು ಸ್ಥಳೀಯರ ಅನಿಸಿಕೆ. ಇಲ್ಲಿನ ಕೆಲವು ಪಳೆಯುಳಿಕೆಗಳು, ಸ್ಮಾರಕಗಳು ಆಕರ್ಷಕವೂ ಆಗಿದ್ದು ಬಹುಕಾಲ ನೋಡುಗರ ನೆನಪಿನಲ್ಲಿ ಉಳಿಯುವಂತಿವೆ. ಇದನ್ನು ಒಂದು ಸುಂದರ ಪ್ರವಾಸಿ ತಾಣವನ್ನಾಗಿಯಾದರೂ ಮಾಡಬಹುದು ಎಂಬುದು ತಜ್ಞರ ಅಭಿಮತ ಕೂಡ.

■ ಯು.ಅನಂತ್